# ಶ್ರೀಮಾತೆಯವರ ಪುಣ್ಯಸ್ಮೃತಿ

ಮೂಲ ಬಂಗಾಳಿ : **ನಿರ್ಮಲ ನಲಿನೀ ಮಿತ್ರ**

ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

(ಸ್ವಾಮಿ ಸುಬೋಧಾನಂದರ ಅಣ್ಣನ ಮಗಳು ನಿರ್ಮಲ ನಲಿನೀ ಮಿತ್ರ. ಅವರ ಪತಿ ಕಾಳೀಕಿರಣ ಮಿತ್ರ. ಡಿಸೆಂಬರ್ ೧೯೬೬ರಲ್ಲಿ, ಅವರು ೭೪ನೇ ವಯಸ್ಸಿನಲ್ಲಿ ತಮ್ಮ ಕೈಯಿಂದಲೇ ತಮ್ಮ ಸ್ಮೃತಿಕಥೆಯನ್ನು ಬರೆದರು. ಪೂಜ್ಯ ಖೋಕಾ ಮಹಾರಾಜರ (ಸುಬೋಧಾನಂದರ) ಅಣ್ಣನ ಮಗನ ಮಗ ಇಂದ್ರಜಿತ್ ಘೋಷ್ ಅವರ ಮೂಲಕ ಈ ಲೇಖನ ಲಭಿಸಿತು. *– ಸಂ* )



**ನ**ನ್ನ ಚಿಕ್ಕಪ್ಪ ಆಗಿದ್ದರು ಖೋಕಾ ಮಹಾರಾಜ್ – ಸ್ವಾಮಿ ಸುಬೋಧಾನಂದರು. ಮಹಾರಾಜರಿಗೆ ಎಂಟು ಮಂದಿ ಅಣ್ಣ ತಮ್ಮಂದಿರಿದ್ದರು. ಅವರಲ್ಲಿ ಮೂರನೆಯವರೇ ಮಹಾರಾಜರು. ನನ್ನ ತಂದೆ ಸುರೇಶಚಂದ್ರ ಘೋಷ್ ಅವರಿಗಿಂತ ಹಿರಿಯರು–ಅಣ್ಣತಮ್ಮಂದಿರಲ್ಲಿ ಎರಡನೆಯವರು.

೧೯೧೫ರ ಫಾಲ್ಗುಣ ಮಾಸದಲ್ಲಿ (ಫೆಬ್ರವರಿ ತಿಂಗಳು) ಶ್ರೀರಾಮಕೃಷ್ಣರ ಜಯಂತಿಯ ದಿನದಂದು ಬೆಳಿಗ್ಗೆ ನಾವು ಮನೆಯವರೆಲ್ಲರೂ ಕುದುರೆಗಾಡಿ ಮಾಡಿಕೊಂಡು ಬೇಲೂರು ಮಠಕ್ಕೆ ಹೋದೆವು. ಶ್ರೀಮಾತೆ ಅಲ್ಲಿಗೆ ಬರಲಿದ್ದಾರೆ ಎಂದು ಅಲ್ಲಿ ನಮಗೆ ತಿಳಿದುಬಂತು. ನಾವೆಲ್ಲರೂ ಶ್ರೀರಾಮಕೃಷ್ಣರ ಹಳೆಯ ದೇವಾಲಯಕ್ಕೆ (ಈಗಿನ ಬೃಹತ್ ಶ್ರೀರಾಮಕೃಷ್ಣರ ದೇವಾಲಯದ ನಿರ್ಮಾಣವಾಗುವ ಮೊದಲು ಇದ್ದ ದೇವಾಲಯ; ಬೇಲೂರು ಮಠ ಆರಂಭವಾದಾಗಿನಿಂದ ಅದೇ ದೇವಾಲಯವಾಗಿತ್ತು.) ಹಾಗೂ ಸ್ವಾಮೀಜಿಯವರ ಕೋಣೆಗೆ ಹೋಗಿ ಪ್ರಣಾಮ ಮಾಡಿ, ಬಳಿಕ ಸ್ವಾಮೀಜಿ ಕೋಣೆಯ ಎರಡನೇ ಅಂತಸ್ತಿನಲ್ಲಿ ಗಂಗಾನದಿಗೆ ಎದುರಾಗಿದ್ದ ವರಾಂಡದಲ್ಲಿ ಕುಳಿತೆವು. ಒಂದು ಗಂಟೆ ಕಳೆಯುವಷ್ಟರಲ್ಲಿ ಶ್ರೀಮಾತೆಯವರು ಬಂದಿದ್ದಾರೆ ಎಂದು ಗೊತ್ತಾಯಿತು. ನಾವೆಲ್ಲರೂ ಲಗುಬಗೆಯಿಂದ ಎದ್ದೆವು. ಶ್ರೀಮಾತೆಯವರು ತಂಗಿದ್ದ ಕೋಣೆಯ ಕಡೆಗೆ ನಾವೆಲ್ಲ ಬೇಗನೆ ಹೊರಟೆವು. ಅನೇಕ ಭಕ್ತರು ಶ್ರೀಮಾತೆಯವರಿಗೆ ಪ್ರಣಾಮ ಮಾಡಲು ಅಲ್ಲಿಗೆ ಬಂದಿದ್ದು, ಭಾರೀ ನೂಕುನುಗ್ಗಲು ಆಗಿಬಿಟ್ಟಿತ್ತು. ಅಲ್ಲೊಬ್ಬರು, ಬಹುಶಃ ಗೋಲಾಪ್ ಮಾ ಇರಬೇಕು, ಹೇಳಿದರು: ''ನಿಲ್ಲಿ, ಶ್ರೀಮಾತೆಯವರು ಮೊದಲು ಸುಧಾರಿಸಿಕೊಳ್ಳಲಿ. ಬಳಿಕ ಪ್ರಣಾಮ ಮಾಡಿ.'' ಅನಂತರ ಪ್ರಣಾಮ ಆರಂಭವಾಯಿತು. ನಮ್ಮ ಮನೆಯ ಹಿರಿಯರೆಲ್ಲರೂ ಶ್ರೀಮಾತೆಯವರಿಗೆ ಪರಿಚಿತರಾಗಿದ್ದರು. ನಾನು ಪ್ರಣಾಮ ಮಾಡಿದಾಗ ಶ್ರೀಮಾತೆಯವರು ನನ್ನನ್ನು ಕಂಡು, ನನ್ನ ಚಿಕ್ಕತಾಯಿಯವರನ್ನು ಕೇಳಿದರು (ಅವರು ಕಾಶೀಶ್ವರೀ ಘೋಷ್; ಖೋಕಾ ಮಹಾರಾಜರ ನಂತರದ, ಅಣ್ಣತಮ್ಮಂದಿರಲ್ಲಿ ನಾಲ್ಕನೆಯವರಾದ ಸಿದ್ಧೇಶ್ವರ ಘೋಷ್* ಅವರ ಪತ್ನಿ) : ''ಇವಳು ಯಾರು? ಈ ಮೊದಲು ನೋಡಿಲ್ಲವಲ್ಲ?'' ನನ್ನ ಚಿಕ್ಕತಾಯಿ ಹೇಳಿದರು: ''ನನ್ನ ಎರಡನೇ ಭಾವನ ಚಿಕ್ಕ ಮಗಳು.'' ಶ್ರೀಮಾತೆಯವರು ಹೇಳಿದರು, ''ಅಯ್ಯೋ, ಇಷ್ಟರಲ್ಲೇ ಮದುವೆಯಾಗಿಬಿಟ್ಟಿದೆ! ಗಂಡನ ಮನೆ ಎಲ್ಲಿ?'' ಚಿಕ್ಕತಾಯಿ ಹೇಳಿದರು, ''ಭವಾನೀಪುರದಲ್ಲಿ, ಮಿತ್ರರ ಮನೆ. ಬಹಳ ಒಳ್ಳೆಯ ಸಂಬಂಧ.'' ಆಗ ಶ್ರೀಮಾತೆಯವರು ನನ್ನ ತಲೆಯ ಮೇಲೆ ಕೈಯಿಟ್ಟು, ''ಸುಖವಾಗಿರು, ಮಗೂ''

---

* ಶ್ರೀರಾಮಕೃಷ್ಣರು ಕಾಯಿಲೆಗೆ ಒಳಗಾಗಿ ಕಾಶೀಪುರದಲ್ಲಿದ್ದಾಗ ಬಾಲಕನಾಗಿದ್ದ ಸಿದ್ಧೇಶ್ವರ ಅಲ್ಲಿಗೆ ಹೋಗುತ್ತಿದ್ದ. ಅವನಿಗೂ ಸಂನ್ಯಾಸಿಯಾಗುವ ಬಯಕೆಯಿತ್ತು. ಆದರೆ ತಾಯಿಯನ್ನು ನೋಡಿಕೊಳ್ಳಬೇಕಾದ್ದರಿಂದ ಅವನು ಮನೆಗೆ ಮರಳಿದ. ಮುಂದೆ ಸ್ವಾಮೀಜಿ ಅವನಿಗೆ ದೀಕ್ಷೆ ನೀಡಲು ಬಯಸಿದಾಗ ಅವನು, ''ನಾನು ಯಾವುದೇ ಮನುಷ್ಯ ಮಾತ್ರರಿಂದ ದೀಕ್ಷೆ ಪಡೆಯಲಾರೆ'' ಎಂದನಂತೆ. ಅದನ್ನು ಕೇಳಿದ ಸ್ವಾಮೀಜಿ, ''ಏನೆಂದೆ? ನಾನು ಮನುಷ್ಯನೆ?'' ಎಂದರು. ಬಳಿಕ, ''ಸರಿ, ನೀನು ಇಲ್ಲೇ ಮುಂದೆ ದೀಕ್ಷೆ ಪಡೆಯಬೇಕಾಗುವುದು'' ಎಂದರು. ಅನೇಕ ಸಮಯದ ಬಳಿಕ ಅವನು ಮಹಾಪುರುಷ ಮಹಾರಾಜರಿಂದ ದೀಕ್ಷೆ ಪಡೆದ. *(–ಸಂ)*

ಎಂದರು. ಪ್ರಸಾದ ತೆಗೆದುಕೊಳ್ಳುವಾಗ ಶ್ರೀಮಾತೆಯವರು ತಮ್ಮ ಕೈಯಿಂದಲೇ ಬಡಿಸಿ ನಮಗೆ ಊಟ ಮಾಡಿಸಿದರು.

ಆಗ ಶ್ರೀಮಾತೆಯವರ ಮೈಬಣ್ಣ ಅಷ್ಟೇನೂ ಕಾಂತಿಯುಕ್ತವಾಗಿರಲಿಲ್ಲ – ತಾಮ್ರದ ಬಣ್ಣದಂತಿತ್ತು. ವಯಸ್ಸಾದ ಕಾರಣ ಆಗ ಅವರ ಮೈಬಣ್ಣ ಈ ರೀತಿ ಮಾಸಿಹೋಗಿತ್ತೆಂದು ನಾನು ನನ್ನ ತಾಯಿ, ಚಿಕ್ಕತಾಯಿಯವರಿಂದ ಕೇಳಿದ್ದೆ. ಮೊದಲಿಗೆ ಅವರ ದೇಹಕಾಂತಿ ಬಹಳ ಉಜ್ವಲವಾಗಿತ್ತಂತೆ. ಅವರ ತಲೆಗೂದಲು ಬಹಳ ನೀಳವಾಗಿತ್ತು ಹಾಗೂ ಕಪ್ಪು ಬಣ್ಣದಿಂದ ಕೂಡಿ ಸುಂದರವಾಗಿತ್ತು. ಮರಳಿ ಬರುವಾಗ ಶ್ರೀಮಾತೆಯವರು ನಮಗೆ ನಮ್ಮ ಮನೆಯ ಇತರರಿಗಾಗಿ ಸಾಕಷ್ಟು ಪೂರಿ ಹಾಗೂ ಬೂಂದಿ ಪ್ರಸಾದ ಕೊಟ್ಟರು. ನಾನು ಶ್ರೀಮಾತೆಯವರನ್ನು ಭೇಟಿಯಾದುದು ಇದೊಂದೇ ಬಾರಿ. ಆಗ ನನಗೆ ಹದಿಮೂರು ವರ್ಷ ವಯಸ್ಸು. ಆದರೆ ಆ ಒಂದು ಸಲದ ಭೇಟಿಯ ನೆನಪು ನನಗೆ ಈ ೯೪ನೇ ವಯಸ್ಸಿನಲ್ಲಿ ಕೂಡ ಸ್ಪಷ್ಟವಾಗಿದೆ. ❖

# ಮಾತೃದರ್ಶನದ ನೆನಪು

**ಮೂಲ ಬಂಗಾಳಿ : ಜಿತೇಂದ್ರಚಂದ್ರ ದತ್ತ**

**ಅನುವಾದ : ಸ್ವಾಮಿ ಜ್ಞಾನಯೋಗಾನಂದ**

ಭಗವಾನ್ ಶ್ರೀರಾಮಕೃಷ್ಣರ ಸಂದೇಶ ಹಾಗೂ ಆದರ್ಶಗಳನ್ನು ಅನುಸರಿಸಿ ಜೀವನವನ್ನು ನಡೆಸುವ ಉದ್ದೇಶದಿಂದ, ಮತ್ತು ಯುವಜನರಲ್ಲಿ ಶ್ರೀರಾಮಕೃಷ್ಣರ ಜೀವನ- ಉಪದೇಶಗಳ ಬಗ್ಗೆ ಚಿಂತನೆ ನಡೆಸುವಂತೆ ಮಾಡಲು ನಾವು ಕೆಲವು ಮಂದಿ ಸ್ನೇಹಿತರು ಮೈಮನ್‌ಸಿಂಗ್ (ಊರಿನ ಹೆಸರು, ಈಗ ಬಾಂಗ್ಲಾ ದೇಶದಲ್ಲಿದೆ) ನಲ್ಲಿದ್ದ 'ಮಹಾಕಾಳಿ ಪಾಠಶಾಲೆ'ಯ ಒಂದು ಕೋಣೆಯಲ್ಲಿ ನಿರ್ದಿಷ್ಟ ಸಮಯದಲ್ಲಿ ಒಟ್ಟುಸೇರುತ್ತಿದ್ದೆವು. ಇದು ೧೯೧೧ನೇ ಇಸವಿಯಲ್ಲಿ ನಡೆದ ಘಟನೆ. ೧೯೧೪ರ ಮಾರ್ಚ್ ತಿಂಗಳಲ್ಲಿ ನಾವು ಶಾಲೆಯ ವತಿಯಿಂದ ಶ್ರೀರಾಮಕೃಷ್ಣರ ಇನ್ನೊಬ್ಬರು ಲೀಲಾ ಸಹಾಯಕರೂ ಈಶ್ವರಕೋಟಿಗಳೂ ಆಗಿದ್ದ ಸ್ವಾಮಿ ಪ್ರೇಮಾನಂದರನ್ನು ಮೈಮನ್‌ಸಿಂಗ್‌ಗೆ ಕರೆದುಕೊಂಡು ಬಂದಿದ್ದೆವು. ಈ ಸಂದರ್ಭದಲ್ಲಿ ಅವರು ನಮ್ಮ ಮನೆಯಲ್ಲಿ ಏಳೆಂಟು ದಿನ ತಂಗಿದ್ದರು. ಈ ಕೆಲವು ದಿನಗಳಲ್ಲಿ ಅವರ ಸೇವೆ ಮಾಡುವ ಅವಕಾಶವನ್ನು ಪಡೆದು ನಾನು ಧನ್ಯನಾಗಿದ್ದೆ. ಅದಾದ ಬಳಿಕ ಅವರು ಕೆಲವು ದಿನ ಢಾಕಾ, ನಾರಾಯಣಗಂಜ್ ಇಲ್ಲೆಲ್ಲ ಇದ್ದರು; ಆ ದಿನಗಳಲ್ಲೂ ನಾನು ಅವರ ಜೊತೆಗಿರುವ ಸೌಭಾಗ್ಯವನ್ನು ಪಡೆದಿದ್ದೆ. ಆ ವರ್ಷದಲ್ಲೇ ನಾನು ದುರ್ಗಾಪೂಜೆಯ ನಂತರ ಪರಮ ಆರಾಧ್ಯರಾದ ಶ್ರೀಮಾತೆಯವರಿಂದ ದೀಕ್ಷೆ ಪಡೆದೆ.



ಕಾರ್ಯನಿಮಿತ್ತದಿಂದ ನನಗೆ ಹಲವು ಬಾರಿ ಕಲ್ಕತ್ತೆಗೆ ಬರಬೇಕಾಗುತ್ತಿತ್ತು. ಈ ಸಂದರ್ಭದಲ್ಲೇ ಶ್ರೀಮಾತೆಯವರ ದರ್ಶನ ಹಾಗೂ ಅವರಿಗೆ ಪ್ರಣಾಮ ಸಲ್ಲಿಸುವ ಸುಯೋಗ ದೊರೆತಿತ್ತು. ಹೆಚ್ಚಿನ ದಿನಗಳಲ್ಲಿ ಪ್ರಣಾಮ ಮಾಡಲು ಅನೇಕ ಮಂದಿ ಭಕ್ತರು ನೆರೆದಿರುತ್ತಿದ್ದರು. ಆದ್ದರಿಂದ ಆಗ ಅವರೊಂದಿಗೆ ವಿಶೇಷವಾಗಿ ಮಾತುಕತೆ ನಡೆಸಲು ಸಾಧ್ಯವಾಗುತ್ತಿರಲಿಲ್ಲ. ಆದರೆ ಒಂದು ದಿನ ಅವರಿಗೆ ನಾನು ಪ್ರಣಾಮ ಮಾಡಿದಾಗ, ಅವರು ನನ್ನ ತಲೆಯ ಮೇಲೆ ಕೈಯಿಟ್ಟು ಆಶೀರ್ವದಿಸಿದರು. ಅದರಿಂದ ನನಗೆ ವಿಶೇಷವಾಗಿ ಕೃತಾರ್ಥನಾದೆನೆಂಬ ಭಾವನೆ ಆವರಿಸಿತು. ಇನ್ನೊಂದು ದಿನ ಅವರ ಬಳಿ ಸಾಧನೆಗೆ ಸಂಬಂಧಪಟ್ಟಂತೆ ಏನೋ ಕೇಳಿದೆ. ಆಗ ಅವರು, ''ಸ್ಮರಣೆ ಮಾಡು'' ಎಂದಷ್ಟೇ ಹೇಳಿದರು. ಅವರ ಈ ಎರಡು ಮಾತುಗಳನ್ನು ಕೇಳಿ, ಅವರ ಮಾತುಗಳನ್ನು ನೆನಪಿನಲ್ಲಿ ಇಟ್ಟುಕೊಳ್ಳಲು ಹೇಳಿದ್ದಾರೆಂದು ನಾನು ತಿಳಿದುಕೊಂಡೆ. ಸಾಕ್ಷಾತ್ ಜಗನ್ಮಾತೆಯೇ ನನ್ನ ಮೇಲೆ ಕೃಪೆ ತೋರಿ ನನ್ನ ಸ್ವರೂಪವನ್ನು ನನಗೆ ವ್ಯಕ್ತಗೊಳಿಸಿದರೆಂದು ನಾನು ಅರ್ಥಮಾಡಿಕೊಂಡೆ.

ಇನ್ನೊಂದು ದಿನ ನಾನು 'ಉದ್ಬೋಧನ'ಕ್ಕೆ ಹೋಗಿ, ಶ್ರೀಮಾತೆಯವರಿಗೆ ಪ್ರಣಾಮ ಮಾಡಿ ಅವರ ಪದತಲದಲ್ಲಿ ಕುಳಿತೆ. ಅವರು ಆಗ ಕಾಲನ್ನು ಕೆಳಗೆ ನೀಡಿ, ಮಂಚದ ಮೇಲೆ ಕುಳಿತಿದ್ದರು. ಇದ್ದಕ್ಕಿದ್ದಂತೆ ಆ ಕೋಣೆಯಲ್ಲಿ ಅವರು ಪೂಜೆ ಮಾಡುತ್ತಿದ್ದ ಶ್ರೀ